# ನಂಬಿದೆ ನಿನ್ನ ಪಾದ ನರಸಿಂಹ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 301.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** Singer has followed these lyrics.

ರಾಗ: ಶಂಕರಾಭರಣ ತಾಳ: ಅಟ

ನಂಬಿದೆ ನಿನ್ನ ಪಾದ ನರಸಿಂಹ, ಎನ್ನ
ಬೆಂಬಿಡದೆ ಸಲಹಯ್ಯ ನರಸಿಂಹ
ಹಂಬಲಿಸುವೆನು ಬಲು ನರಸಿಂಹ, ಪಾದ
ನಂಬಿದವರನು ಕಾಯೋ ನರಸಿಂಹ ॥ ೧ ॥

ತುಂಬುರು ನಾರದಪ್ರಿಯ ನರಸಿಂಹ, ಚೆಲ್ವ
ಶಂಬರಾರಿಯ ಪಿತನೆ ನರಸಿಂಹ
ಅಂಬರೀಷನ ಕಾಯ್ದ ನರಸಿಂಹ, ಜಗ-
ದಂಬಾರಮಣನೆ ಸಿರಿ ನರಸಿಂಹ ॥ ೨ ॥

ಬಾಲ ಕರೆದಲ್ಲಿ ಬಂದೆ ನರಸಿಂಹ, ಭಕ್ತ
ಪಾಲಿಪ ದಯಾಳು ಸಿರಿ ನರಸಿಂಹ
ಲೀಲೆಯಿಂದ ಹಿರಣ್ಯನ ನರಸಿಂಹ ಕೊಂದ
ಲೋಲ ಸಿರಿಯರಸನೆ ನರಸಿಂಹ ॥ ೩ ॥

ಅಚ್ಯುತಾನಂತ ಗೋವಿಂದ ನರಸಿಂಹ, ಸಿರಿ
ಸಚ್ಚಿದಾನಂದ ಮುಕುಂದ ನರಸಿಂಹ

ಕಿಚ್ಚಿನಂದದಿ ಬಂದೆ ನರಸಿಂಹ, ಭವ

ವಿಚ್ಚೆಯಿಂದ ಬಿಡಿಸಯ್ಯ ನರಸಿಂಹ ॥ ೪ ॥

ಕರಿ ಮೊರೆಯನು ಕೇಳಿ ನರಸಿಂಹ, ಬಲು

ಭರದಿಂದೊದಗಿ ಬಂದೆ ನರಸಿಂಹ

ಗರುಡ ವಾಹನನಾಗಿ ನರಸಿಂಹ, ಉ-

ದ್ಧರಿಸಿ ಕಾಯ್ದೆ ಯಲ್ಲೋ ನರಸಿಂಹ ॥ ೫ ॥

ದೇವರ ದೇವನು ನೀನು ನರಸಿಂಹ, ಬೇರೆ

ಕಾವರನು ಕಾಣೆನಯ್ಯ ನರಸಿಂಹ

ಭಾವಜನಯ್ಯನೆ ಸಿರಿ ನರಸಿಂಹ, ನಿನ್ನ

ಸೇವೆಯ ಪಾಲಿಸಿ ಕಾಯೋ ನರಸಿಂಹ ॥ ೬ ॥

ತಂದೆ ತಾಯಿ ಗುರು ದೈವ ನರಸಿಂಹ, ಎನ್ನ

ಬಂಧು ಬಳಗವು ನೀನೆ ನರಸಿಂಹ

ಕುಂದು ಹೆಚ್ಚು ನೋಡಬೇಡ ನರಸಿಂಹ, ಪು-

ರಂದರವಿಠಲ ಕಾಯೋ ನರಸಿಂಹ ॥ ೭ ॥

**Classification:** Keerthane
**Ankita:** purandara vittala
**Location:** NA
**Category:** Narasimha Stuti
**Sub-Category:** Narasimha, narada, Priya, ambarisha, Lakshmi, prahallada, daya, asura, achyuta, govinda, gaja, garuda, deva, tande, tayi, bandhu,
**Pravachana:** NA
**Explanation:** NA